


# ನಕ್ಕುಬಿಡಿ..!

ಕಳ್ಳರಿಬ್ಬರು ಜೈಲಲ್ಲಿ ಮಾತಾಡುತ್ತಿದ್ದರು.

'ನೀನು ಹೇಗೆ ಪೊಲೀಸ್ ಕೈಗೆ ಸಿಕ್ಕಿಬಿದ್ದೆ?'

'ಆ ಚಿನ್ನದ ಅಂಗಡೀಲಿ ರೋಲ್ಡ್ ಗೋಲ್ಡ್ ಆಭರಣಗಳು ಇದ್ದವು. ಯಾವುದು ಒರಿಜಿನಲ್ಲು ಅಂತ ಉಜ್ಜಿ, ಉಜ್ಜಿ ನೋಡುತ್ತಿದ್ದೆ. ಶಬ್ದ ಕೇಳಿ ಬೀಟ್ ಪೊಲೀಸ್‌ನವರು ಬಂದ್ರು.'

★★★

ಸಂಸಾರದಲ್ಲಿ ಮಡದಿಯ ಕಾಟ ತಾಳಲಾರದ ಗಂಡ ಅವಳ ಸೀರೆಯಿಂದಲೇ ನೇಣು ಕುಣಿಕೆ ಸಿದ್ಧಪಡಿಸಿಕೊಂಡಿದ್ದ. ಉರುಳು ಸ್ಟೂಲು ಒದೆಯುವ ಮೊದಲು ಮಡದಿ ಧಾವಿಸಿ ಬಂದಳು.



'ಛೀ, ಬುದ್ಧಿ ಇದೆಯಾ ನಿಮಗೆ? ಅದು ನನ್ನ ದೀಪಾವಳಿ ಸೀರೆ– ತೆಗೀರಿ ಮೊದಲು, ನಿಮಗೆ ಬೇರೆ ಹಗ್ಗ ತಂದು ಕೊಡ್ತೀನಿ' ಎಂದು ಸಿಟ್ಟಿನಿಂದ ಗುಡುಗಿದಳು.

★★★

'ಅಲ್ರೋ ನಿನ್ನ ಹೆಂಡತಿ ಶಂಕರ್ ಜೊತೆ ಓಡಾಡ್ತಾ ಇದ್ರೂ ನೀನು ಯಾಕೆ ಸುಮ್ನೆ ಇರ್ತೀಯಾ?'

'ಅವಳ್ನ ನಾನು ಕರ್ಕೊಂಡ್ ಹೋದ್ರೆ ಸಖತ್ ಕಾಸು ಖರ್ಚಾಗುತ್ತೆ. ಈಗ ಅವನ ಕಾಸು ಖರ್ಚಾಗುತ್ತೆ. ಸಾಯಲಿ ಬಿಡು ಕಂಜೂಸ್ ನನ್ನಗ..'



★★★

ಶಿಕ್ಷಕ: 'ನೋಡಿ ಮಕ್ಕಳೆ, ಮನುಷ್ಯನೊಬ್ಬ ಕತ್ತೆಗೆ ಹೊಡೆಯುತ್ತಿರುವುದನ್ನು ಕಂಡು ನಾನು ಅದನ್ನು ತಡೆದೆ ಎಂದು ಭಾವಿಸಿ, ನಾನು ಎಂಥಾ ಭಾವನೆಯನ್ನು ಇಲ್ಲಿ ವ್ಯಕ್ತಪಡಿಸಿದಂತಾಯಿತು?'

ಗುಂಡ: 'ಸಹೋದರ ಪ್ರೀತಿ ಸರ್.'

–ಜಗದೀಶ ಎಂ. ಸಂಗಣ್ಣವರ, ಬೆಳಗಾವಿ